VIJAYAKUMAR KANNUR
Digitally signed by VIJAYAKUMAR KANNUR
Date: 2025.08.12 10:45:31 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 11.08.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 3 ರಿಂದ 5 ಪರ ಶ್ರೀ ಎಂ ಎಸ್ ಸಿ ವಕೀಲರಿಂದ :**

ನಾನು ಒಕ್ಕಲತನ ಉದ್ಯೋಗ ಮಾಡುತ್ತೇನೆ. ವಾದ ಪತ್ರದ ಕಚ್ಚಾ ನಕಾಶೆಯಲ್ಲಿ ಕಾಣಿಸಿರುವಂತೆ ನಮ್ಮ ಜಮೀನು ಉತ್ತರ ದಿಕ್ಕಿಗೆ ಇರುವ ಮುಧೋಳ ಮಳಲಿ ರಸ್ತೆಗೆ ಹೊಂದಿಕೊಂಡಿರುವುದು. ಪ್ರತಿವಾದಿ 1 ರವರ ಮಾಲೀಕತ್ವದ ಜಮೀನಿನ ದಕ್ಷಿಣ ದಿಕ್ಕಿಗೆ ಹೊಂದಿಕೊಂಡೇ ಘಟಪ್ರಬಾ ನದಿಯಿಂದ ನೀರನ್ನು ಪಡೆಯಲು ಪಂಪಸೆಟ್ ಕೂಡಿಸಿರುವೆವು. ಪ್ರತಿವಾದಿ 1 ರವರ ಜಮೀನಿನಲ್ಲಿ 3 ಫಿಟ್ ಆಳದಲ್ಲಿ ಈ ಪೈಪಲೈನ್ ಗಳನ್ನು ಹಾಕಿರುವೆವು.

2. ಸರ್ವೇ ನಂಬರ್ 83/2 ಮೂಲತಃ 7 ಎಕರೆ 20 ಗುಂಟೆಯ ವಿಸ್ತೀರ್ಣದ ಜಮೀನು ಇತ್ತು ಎಂದರೆ ಸರಿ. ಪ್ರತಿವಾದಿ 1 ಮತ್ತು 2 ರವರ ಮಧ್ಯೆ 2004 ರಲ್ಲಿ ಸರ್ವೇ ನಂಬರ್ 83/2 ರ ಜಮೀನಿಗೆ ಸಂಬಂಧಪಟ್ಟಂತೆ ಪಾಲು ವಾಟ್ನಿ ಆಗಿರುವುದು ಎಂದರೆ ಸರಿ. ಈ ಪಾಲು ವಾಟ್ನಿಯ ಪ್ರಕಾರ ಸದರಿ ಜಮೀನಿನ ಪಶ್ಚಿಮ ದಿಕ್ಕಿನ 2 ಎಕರೆ 1 ಗುಂಟೆ ಜಮೀನು ಪ್ರತಿವಾದಿ 1 ರವರ ಪಾಲಿಗೆ , ಉಳಿದ ಪೂರ್ವ ದಿಕ್ಕಿನ 5 ಎಕರೆ 20 ಗುಂಟೆ ಜಮೀನು ಪ್ರತಿವಾದಿ 2 ರವರ ಪಾಲಿಗೆ ಬಂದಿರುವುದು ಎಂದರೆ ಸರಿ. ಪ್ರತಿವಾದಿ 1 ರವರು ಈ ಪೈಪಲೈನ್ ಸಲುವಾಗಿ ಹಕ್ಕಿನ ಪತ್ರವನ್ನು 2001 ರಲ್ಲಿ ಬರೆದು ನನಗೆ ಕೊಟ್ಟಿರುವರು. ವಾದಿ 1, ವಾದಿ 6 7, ಮತ್ತು ಪ್ರತಿವಾದಿ 8 ವಿನ ಗಂಡನಾದ ಮೃತ ಕೃಷ್ಣಗೌಡ ಪಾಟೀಲ ರವರಿಗೂ ಸಹ ಪ್ರತಿವಾದಿ 1 ರವರು ಹಕ್ಕಿನ ಪತ್ರವನ್ನು ಬರೆದುಕೊಟ್ಟಿರುವರು , ಯಾವ ವರ್ಷದಲ್ಲಿ ಎಂದು ನನಗೆ ಹೇಳಲು ಆಗುವುದಿಲ್ಲ. ಪ್ರತಿವಾದಿ 2 ರವರ ಪಾಲಿಗೆ ಬಂದಿರುವ ಸರ್ವೇ ನಂಬರ್ 83/2 ಬಿ 5 ಎಕರೆ 20 ಗುಂಟೆಯ ಜಮೀನನ್ನು 2004 ರಿಂದಲೂ ಅವರೇ ಕಬ್ಜೆ ಹೊಂದಿ ಸಾಗುವಳಿ ಮಾಡುತ್ತಿರುವರು ಎಂದರೆ ಸರಿ.

3. ಬಸಪ್ಪ ತಂದೆ ಭೀಮಪ್ಪ ಅಡವಿ ಇವರಿಗೆ 2007 ರಲ್ಲಿ ಪ್ರತಿವಾದಿ 2 ರವರು ತಮ್ಮ ಪಾಲಿಗೆ ಬಂದಿರುವ 5 ಎಕರೆ 20 ಗುಂಟೆ ಜಮೀನನ್ನು ಮಾರಾಟ ಮಾಡಿರುವರು ಎಂದರೆ ಸರಿ. ಈ ಜಮೀನನ್ನು ಪ್ರತಿವಾದಿ 3 ರಿಂದ 5 ರವರು ಕಬ್ಜೆಯನ್ನು ಹೊಂದಿ ಸಾಗುವಳಿ ಮಾಡುತ್ತಾ ಇರುವರು ಎಂದರೆ ಸರಿ. ಪ್ರತಿವಾದಿ 1 ರವರು ನಮಗೆ ಬರೆದುಕೊಟ್ಟಿರುವ ಹಕ್ಕಿನ ಪತ್ರದಲ್ಲಿ ಪೂರ್ವದ ಭಾಗದ ರಸ್ತೆ ಅಂತ ಹೇಳಿ ಬರೆದುಕೊಟ್ಟಿರುವರು. 2006 ರಲ್ಲಿ ಪ್ರತಿವಾದಿ 1 ರವರು ಬರೆದುಕೊಟ್ಟಿರುವ ಹಕ್ಕಿನ ಪತ್ರದ ಸಮಯದಲ್ಲಿ ಅವರು ಮಾಲೀಕರು ಆಗಿರಲಿಲ್ಲ ಎಂದರೆ ಸಾಕ್ಷಿ ನುಡಿಯುವುದೇನೆಂದರೆ ಪ್ರತಿವಾದಿ 1 ರವರು ಹಕ್ಕು ಬರೆದುಕೊಡುವ ಪೂರ್ವದಿಂದಲೂ, ಬರೆದುಕೊಟ್ಟ ನಂತರ ಹಾಗೂ ಈಗಲೂ ಸಹ ಪೂರ್ವ ದಿಕ್ಕಿನ ರಸ್ತೆಯಲ್ಲಿಯೇ ಹಾದು ಹೋಗುತ್ತಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು. ಪ್ರತಿವಾದಿ 3 ರಿಂದ 5 ರವರ ತಂದೆಯ ಕಾಲದಿಂದಲೂ ಈ ಆಸ್ತಿಯನ್ನು ಖರೀದಿ ಮಾಡಿದ ನಂತರ ಈ ರಸ್ತೆಯಲ್ಲಿ ಹಾದುಹೋಗದಂತೆ ಈ ಪ್ರತಿವಾದಿಯರು ತಕರಾರು ಮಾಡಿರುವರು ಎಂದರೆ ಸರಿಯಲ್ಲ. ಈ ರಸ್ತೆಗೆ ಪ್ರತಿವಾದಿಯರು 2022 ರಲ್ಲಿ ತಕರಾರು ಮಾಡಿರುವರು. ಊರಿನ ಹಿರಿಯರಾದ ಮಹೇಶ್ ನಾಗರೆಡ್ಡಿ, ಹಣಮಂತಗೌಡ ಬೀರಾದಾರ ಪಾಟೀಲ, ಕಾಡಪ್ಪ ಪಡಸಲಗಿ, ಗೌಡಪ್ಪ ಪಾಟೀಲ ಇವರು ನಮಗೆ ಈ ದಾವಾ ಆಸ್ತಿಯಲ್ಲಿ ಹಕ್ಕು ಇರುವುದಿಲ್ಲ, ಈ ರಸ್ತೆಯ ಮೇಲೆ ಹಾಯಬೇಡಿ ಎಂದು ಹೇಳುತ್ತಿದ್ದರು ಎಂದರೆ ಸರಿಯಲ್ಲ.

4. ಪ್ರತಿವಾದಿ 1 ರವರ ಜಮೀನಿನಲ್ಲಿ ಪೈಪಲೈನ್ ನ್ನು ತೆಗೆದುಕೊಂಡು ಹೋಗಲು ತಹಶೀಲ್ದಾರ್ ಇವರ ಕಡೆಯಿಂದ ಅನುಮತಿ ಪಡೆದುಕೊಂಡಿರುವೆವು. ಈ ಅನುಮತಿ ಪಡೆದ ದಾಖಲಾತಿಯನ್ನು ಹಾಜರು ಪಡಿಸಿರುವುದಿಲ್ಲ. ಈ ನೀರಾವರಿಗಾಗಿ ವಿದ್ಯುತ್ ಯಂತ್ರವನ್ನು ಅಳವಡಿಸಿದ ಬಗ್ಗೆ ಕರ್ನಾಟಕ ವಿದ್ಯುತ್ ಶಕ್ತಿ ನಿಗಮದವರು ನೀಡಿರುವ ಕ್ರಮ ಸಂಖ್ಯೆ ನನಗೆ ನೆನಪಿರುವುದಿಲ್ಲ. ಪ್ರತಿವಾದಿ 1 ರವರು 2021 ನೇ ಸಾಲಿನಲ್ಲಿ ನಾನು , ಪ್ರತಿವಾದಿ 1 ಮತ್ತು 4 ರವರು ಅವರ ಜಮೀನಿನಲ್ಲಿ ಇರುವ ಕಬ್ಬನ್ನು ನಾಶಪಡಿಸಿದ ಬಗ್ಗೆ ಮುಧೋಳ ಪೊಲೀಸ್ ಠಾಣೆಯಲ್ಲಿ ಒಂದು ದೂರನ್ನು ದಾಖಲು ಮಾಡಿರುವರುಎದಂರೆ ಸರಿ. ನನ್ನ ವಿರುದ್ದ ಪೊಲೀಸ್ ಠಾಣೆಯ ಪ್ರಥಮ ವರ್ತಮಾನ ವರದಿಯೂ ಸಹ ದಾಖಲು ಆಗಿರುವುದು ಎಂದರೆ ಸರಿ. ಆ ಪ್ರಕರಣದ ತನಿಖೆ ಕೈಗೊಂಡು ಪೋಲಿಸರು ನಮ್ಮ ವಿರುದ್ದ ಅಂತಿಮ ವರದಿ

ಸಲ್ಲಿಸಿರುವರು ಎಂದರೆ ಅದು ಸುಳ್ಳು ಇರುವುದು ಎಂದು ಸಾಕ್ಷಿ ಉತ್ತರಿಸುವರು. ನಮ್ಮ ವಿರುದ್ದ ಪೊಲೀಸ್ ಠಾಣೆಯಲ್ಲಿ ಪ್ರತಿವಾದಿ 1 ರವರು ದೂರು ದಾಖಲು ಮಾಡಿರುವ ಸಿಟ್ಟಿನಿಂದ ಅವರಿಗೆ ತೊಂದರೆ ನೀಡುವ ಸಲುವಾಗಿ ಈ ಸುಳ್ಳು ದಾವೆಯನ್ನು ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿ 3 ರಿಂದ 5 ಮತ್ತು ನಮ್ಮ ಮಧ್ಯೆ ಯಾವುದೇ ವೈಮನಸ್ಸು ಇರದೇ ಇದ್ದರೂ ಸಹಿತ ಪ್ರತಿವಾದಿ 1 ರವರ ಮೇಲಿನ ವೈಮನಸ್ಸು ಇರುವುದರಿಂದ ಈ ಸುಳ್ಳು ದಾವೆ ದಾಖಲು ಮಾಡಿದ್ದೇವೆ ಅಂತ ಸೂಚಿಸುವುದು ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

VIJAYAKUMAR KANNUR
Digitally signed by VIJAYAKUMAR KANNUR
Date: 2025.08.12 10:45:37 +0530

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ